been six Headmasters posted but during certain period there has been absence due to the person either being on leave or not reporting for duty.

NON-ENCASHMENT OF GOVERNMENT CHEQUES AT SHIMOGA TREASURY.

33. Sri S. M. SHEERANALY CHANDRASEKHAR (Hosanagar).—

Will the Minister for Community Development and Social Welfare be pleased to state :—

(*a*) whether it is a fact that the cheques issued to individuals in respect of Takavi Loans sanctioned to them by Taluk Development Boards were not encashed in the Treasury at Shimoga ;

(*b*) if so, the reasons for the same ?

Sri M. MALLIKARJUNASWAMY (Minister for Community Development and Social Welfare).—

(*a*) No.

(*b*) The question does not arise.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ತಕಾವಿ ಲೋನಿನ ಬಗ್ಗೆ ಚಕ್ ಪಾಸ್ ಮಾಡತಕ್ಕ ಅಧಿಕಾರಿಗಳು ಖಜಾನೆಯಲ್ಲಿ ವ್ಯಕ್ತಿಗಳ ಕೈಯ್ಯಿಂದ ಸೈನ್ ಹಾಕಿಸಿಕೊಂಡು ಅವನ್ನು ಕ್ಯಾಷ್ ಮಾಡಿಸಿ ಕೊಡುವಾಗ ಅವನಿಗೆ ನಲ್ಲಬೇಕಾದ ಹಣಕ್ಕಿಂತ ಕಡಿಮೆಯಾಗಿ ಕೊಡುತ್ತಾ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಅದು ಸರ್ಕಾರದ ಗಮನಕ್ಕೆ ಬಂದಿಲ್ಲ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಆ ರೀತಿಯಲ್ಲಿ ಚಕ್ ಪಾಸ್ ಮಾಡತಕ್ಕ ಅಧಿಕಾರಿಗಳು ಕೊಲ್ಯೂಷನ್ ಆಗುತ್ತಾ ಇರುವಂತಹ ಸಂದರ್ಭಗಳನ್ನು ತಮ್ಮ ಗಮನಕ್ಕೆ ತಂದರೆ ಅವರ ಬಗ್ಗೆ ಏನಾದರೂ ತಕ್ಕ ಕ್ರಮವನ್ನು ತೆಗೆದುಕೊಳ್ಳುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಖಂಡಿತವಾಗಿ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ನಾನು ಸ್ಪೆಸಿಫಿಕ್ಕಾಗಿ ಕೆಲವು ನಿದರ್ಶನಗಳನ್ನು ತಮಗೆ ಬರೆದು ಕಳುಹಿಸಿದ್ದರೂ ಇದುವರೆಗೆ ಅವುಗಳ ಬಗ್ಗೆ ಏನೂ ಕ್ರಮವನ್ನು ತೆಗೆದುಕೊಳ್ಳಲಿಲ್ಲ, ಕಾರಣವೇನು ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಸ್ಪೆಸಿಫಿಕ್ಕಾಗಿ ನನಗೆ ಯಾವ ನಿದರ್ಶನಗಳು ಬಂದಿಲ್ಲ. ಆ ರೀತಿಯಾಗಿ ಬಂದರೆ ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್. ಬಂಗಾರಪ್ಪ.—ಈ ರೀತಿ ಚಕ್‌ಗಳನ್ನು ಕೊಟ್ಟಿರುವ ಸಂದರ್ಭಗಳಲ್ಲಿ ಟ್ರೆಜರಿಯಲ್ಲಿ ಹಣವಿಲ್ಲವೆಂದು ಹೇಳಿ, ಆ ಚಕ್‌ಗಳಿಗೆ ಸಂಬಂಧಪಟ್ಟ ವ್ಯಕ್ತಿಗಳಿಂದ ರುಜು ಹಾಕಿಸಿಕೊಂಡು ತಾಲ್ಲೂಕುಬೋರ್ಡ್ ಅಧಿಕಾರಿಗಳು ಅವರಿಂದ ಕೆಲಮಟ್ಟಿಗೆ ಪರ್ಸಂಟೇಜ್ ತೆಗೆದುಕೊಂಡು ಉಳಿದ ಹಣವನ್ನು ಆ ವ್ಯಕ್ತಿಗಳಿಗೆ ಕೊಡುತ್ತಾ ಇರುವುದು ತಮ್ಮ ಗಮನಕ್ಕೆ ಬಂದಿದೆಯೇ ? ಒಂದು ವೇಳೆ ಅಂತಹ ನಿದರ್ಶನಗಳನ್ನು ತಮ್ಮ ಗಮನಕ್ಕೆ ತಂದರೆ, ಅವುಗಳ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೀರಾ ?

ಶ್ರೀ ಎಂ ಮಲ್ಲಿಕಾರ್ಜುನಸ್ವಾಮಿ.—ಅಂಥಾದ್ದು ಯಾವುದೂ ನನ್ನ ಗಮನಕ್ಕೆ ಬಂದಿಲ್ಲ. ಗಮನಕ್ಕೆ ಬಂದರೆ ತಕ್ಕ ಕ್ರಮವನ್ನು ತೆಗೆದುಕೊಳ್ಳುತ್ತೇನೆ.